ಶ್ರೀ ಎಂ. ಪಿ. ಪ್ರಕಾಶ್(ಕೃಷಿ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ಬೀಜೋತ್ಪಾದನಾ ಕ್ಷೇತ್ರವನ್ನಿನ್ನೂ ತೀರ್ಮಾನಿಸಿಲ್ಲ.

ಇ) ಇದನ್ನು ಸದ್ಯದಲ್ಲೇ ನಿರ್ಧರಿಸಲಾಗುವುದು.

ಈ) — ಅದೇ —

ನರೇಗಲ್ಲ ನಗರದಲ್ಲಿ ಪ್ರಾಥಮಿಕ ಶಾಲಾ ಕಟ್ಟಡಗಳ ಬಗ್ಗೆ

೧೯೨೫. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).— ಮಾನ್ಯ ಪ್ರಾಥಮಿಕ ಹಾಗೂ ಪಯಂಸ್ಕರ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೋಣ ತಾಲ್ಲೂಕು ನರೇಗಲ್ಲ ನಗರಸಭೆಯ ವ್ಯಾಪ್ತಿಯಲ್ಲಿರುವ ಪ್ರಾಥಮಿಕ ಶಾಲೆಗಳಿಗೆ ಕಟ್ಟಡಗಳ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಕಟ್ಟಡಗಳನ್ನು ಕಟ್ಟಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ರಘುಪತಿ (ಶಿಕ್ಷಣ ಸಚಿವರು). —

ಅ) ಬಂದಿದೆ.

ಆ) ೧೯೮೬-೮೭ರಲ್ಲಿ ಹಣ ಒದಗಿಸಿ ಕಟ್ಟಡ ನಿರ್ಮಾಣ ಕೈಗೊಳ್ಳಲಾಗುವುದು.

ಬರಗಾಲ ಪೀಡಿತ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ ರೋಣ ತಾಲ್ಲೂಕಿನಲ್ಲಿ ಅಪೂರ್ಣವಾಗಿರುವ ಯೋಜನೆಗಳ ಬಗ್ಗೆ

೧೯೩೦. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).— ಮಾನ್ಯ ಗ್ರಾಮಾಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೋಣ ತಾಲ್ಲೂಕು ರಾಜೂರು ಪಾಗೂ ಉಣಚಗೇರಿ ಗ್ರಾಮಗಳಲ್ಲಿ ಬರಗಾಲ ಪೀಡಿತ ಪ್ರದೇಶಾಭಿವೃದ್ಧಿ ಯೋಜನೆಯು ಮೇರೆಗೆ ತುಂತುರು ನೀರಾವರಿ ಯೋಜನೆಯನ್ವಯ ಕೊಳವೆ ಭಾವಿಗಳನ್ನು ಯಾವ ವರ್ಷ ಕೊರೆಯಲಾಗಿದೆ.

ಆ) ಈ ಯೋಜನೆಗಳಿಗೆ ಇಲ್ಲಿಯವರೆವಿಗೆ ಸರಕಾರದಿಂದ ಖರ್ಚಾದ ಹಣವೆಷ್ಟು ?

ಇ) ಈ ಯೋಜನೆಗಳನ್ನು ತೀರ್ವ ಮುಗಿಸಲು ಸರಕಾರದವರಿಗೆ ಎಷ್ಟು ಕಾಲಾವಕಾಶ ಬೇಕಾಗುವುದು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಣಾಭಿವೃದ್ಧಿ ಹಾಗೂ ಪಂಚಾಯತ್ ಮಂತ್ರಿಗಳು).—

ಅ) ರೋಣ ತಾಲ್ಲೂಕಿನ ರಾಜೂರು ಹಾಗೂ ಉಣಚಗೇರಿ ಗ್ರಾಮಗಳಲ್ಲಿ ಡಿಪಿಏಪಿ ಯೋಜನೆಯಲ್ಲಿ ಕೊಳವೆ ಭಾವಿಗಳನ್ನು ೧೯೮೦-೮೧ನೇ ಸಾಲಿನಲ್ಲಿ ಕೊರೆಯಲಾಗಿದೆ. ಈ ಕೆಲಸವನ್ನು ಮೆಸರ್ಸ್ ಒಲ್ಟಾಸ್ ಲಿಮಿಟೆಡ್, ಬೆಂಗಳೂರು ಇವರಿಗೆ ವಹಿಸಲಾಗಿತ್ತು. ಆದರೆ ಸದರೀ ಗುತ್ತಿಗೆದಾರರು ಕೆಲಸವನ್ನು ಪೂರ್ತಿ ನಿರ್ವಹಿಸಿಲ್ಲ; ಆದ್ದರಿಂದ ಕೆಲಸ ಅಪೂರ್ಣವಾಗಿ ಉಳಿಯಿತು.

ಆ) ಈ ಯೋಜನೆಗಳಿಗೆ ಇಲ್ಲಿಯವರೆವಿಗೆ ಸರಕಾರದಿಂದ ಹಣ ಖರ್ಚಾಗಿರುವುದಿಲ್ಲ. ಮೆಸರ್ಸ್ ಒಲ್ಟಾಸ್ ಲಿಮಿಟೆಡ್, ಬೆಂಗಳೂರು ಇವರು ಕೆಲಸವನ್ನು ಪೂರ್ತಿ ನಿರ್ವಹಿಸದೇ ಇದ್ದುರಿಂದ ಅವರಿಗೆ ಸರಕಾರದಿಂದ ಹಣವನ್ನು ಪಾವತಿ ಮಾಡಿರುವುದಿಲ್ಲ.

ಇ) ಈ ಯೋಜನೆಗಳನ್ನು ಪ್ರಸಕ್ತ ೧೯೮೫-೮೬ನೇ ಸಾಲಿನಲ್ಲಿ ತೆಗೆದುಕೊಳ್ಳಲು ಯೋಜಿಸಲಾಗಿದೆ. ಈ ಅಪೂರ್ಣವಾದ ಯೋಜನೆಗಳ ಭಾವಿಗಳನ್ನು ಪೂರ್ತಿಯಾಗಿ ಸ್ವಚ್ಛ ಮಾಡಿಸಬೇಕಾಗುವುದು. ಭಾವಿಗಳನ್ನು ಸ್ವಚ್ಛ ಮಾಡಿಸಿದ ನಂತರ ನೀರಾವರಿಯಾಗುವ ಸಾಧ್ಯತೆಗಳಿದ್ದಲ್ಲಿ, ಐಪಿಸೆಟ್